Sri H. N. NANJE GOWDA (Minister of State for Major Irrigation) : Introduce the Mysore Sales Tax (Amendment) Bill 1973.

MADAM SPEAKER.—Bill is introduced. * *

Supply of of inadeguate rice in Belgaum.

ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ಬೆಳಗಾಂನಲ್ಲಿ ಜನರಿಗೆ ಒಬ್ಬರಿಗೆ ದಿನಕ್ಕೆ ದೊಡ್ಡವರಿಗೆ 2 ಗ್ರಾಂ ಅಕ್ಕಿಯನ್ನು ಕೊಡುತ್ತಿದ್ದಾರಂತೆ. ಅದು ಬಹಳ ಅನ್ಯಾಯ. ಅಷ್ಟರಲ್ಲಿ ಜೀವಿಸಿಕೊಂಡು ಇರುವುದಕ್ಕೆ ಸಾಧ್ಯವೇ ? ತಿಂಗಳಿಗೆ 180 ಗ್ರಾಂ ಕೊಡುವುದೆಂದರೆ ಇದಕ್ಕಿಂತ ದೊಡ್ಡ ಅನ್ಯಾಯ ಇನ್ನಾವುದು ಬೇಕು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ಮೇಲೆ ಇಂಥಾ ವಿಷಯಗಳನ್ನು ನಥೆಯಲ್ಲಿ ಕರಾಪಿಕ ತರಬಾರದೆಂದು ಹೇಳುತ್ತೇನೆ.

ಶ್ರೀ ಪಾಟಾಳ್ ನಾಗಾರಾಜ್.—ಹಾಗಾದರೆ ಜನರು ಯಾರೂ ಸದಸ್ಯರಿಗೆ ಇನ್ನು ಮುಂದೆ ಇಂಥ ವಿಚಾರಗಳನ್ನು ಕುರಿತು ಕಾಗದ ಪತ್ರಗಳನ್ನು ಬರೆಯಬಾರದೆಂದು ಒಂದು ಕಾನೂನು ಮಾಡಿದರೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು.

Budget Estimates for 1973-74 - General Discussion (Debate continued)

ಶ್ರೀ ಜೆ. ಎಸ್. ಅಮ್ಮಣ್ಣವರ್ (ಸಾದಲಗ).—ಇನ್ನು ನಮ್ಮ ಈ ಅಂದಾಜು ಪಟ್ಟಿಯಲ್ಲಿ ಜಮೆಯ ಬಾಬುಗಳೇನಿವೆ ಅವುಗಳಲ್ಲಿ ಬರಬೇಕಾದ ಹಣ ಬಹಳವಾಗಿ ಹಾಗೇ ನಿಂತು ಹೋಗಿದೆ. ಆಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೇಸುಗಳು 1965 ರಿಂದ 1973ವರೆಗೂ ಇತ್ಯರ್ಥವಾಗದೇ ಇರುವುದರಿಂದ ಬರಬೇಕಾದ ಹಣ ಒಂದೇ ಸಮನಾಗಿ ಮುಂದುವರಿದುಕೊಂಡು ಬರುತ್ತಿದೆ. ಹೀಗೆ ಬರುವ ಹಣವನ್ನು ಕೇಸುಗಳು ಇತ್ಯರ್ಥವಾಗದ ಮೂಲಕ ನಿಲ್ಲಿಸಿಕೊಂಡು ಹೋಗುವುದು ಸರಿಯಲ್ಲ. ಆಯಾ ವರ್ಷದ ಬಾಕಿಯನ್ನು ಆಯಾ ವರ್ಷದಲ್ಲೇ ಅದನ್ನು ನಿಖರವೆ ಮಾಡಿಕೊಂಡು ಹೋಗುವುದು ಒಳ್ಳೆಯದು.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ—ಹಿಂದೆ ಪಾಸಾಗುತ್ತಿದ್ದ ಹುಡುಗರ ಸಂಖ್ಯೆಯನ್ನು ಇತ್ತೀಚೆಗೆ ಪಾಸಾಗತಕ್ಕ ಹುಡುಗರ ಸಂಖ್ಯೆಗೆ ಹೋಲಿಸಿದಾಗ ಇತ್ತೀಚೆಗೆ ಪರೀಕ್ಷೆಗಳಲ್ಲಿ ಫೇಲಾಗತಕ್ಕ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಇದಕ್ಕೇನು ಕಾರಣ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು 30 ವರ್ಷಗಳ ಹೆಡ್‌ಮಾಸ್ಟರ್ ಕೆಲಸಮಾಡಿ ನಿವೃತ್ತಿ ಹೊಂದಿರತಕ್ಕ ಒಬ್ಬ ಶ್ರೀ ಶರ್ಮಾ ಎಂಬ ಉಪಾಧ್ಯಾಯರನ್ನು ಕೇಳಿದ್ದಕ್ಕೆ ಅವರು ಹೇಳಿದರು ಅವರ ಪೂರ್ಣ ಸರ್ವೀಸಿನಲ್ಲಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ಒಬ್ಬನು ಮಾತ್ರ ಫೇಲಾಗಿ ಇನ್ನೊಬ್ಬ ವಿದ್ಯಾರ್ಥಿ ಮೂರನೇ ದರ್ಜೆಯಲ್ಲಿ ಪಾಸಾಗಿದ್ದಾನೆಂದು ಹೇಳಿದರು. ಅಂದರೆ ಹಿಂದೆ ಯಾವ ಯಾವ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪಾಸಾಗುತ್ತಿದ್ದರೆಂಬುದು ಅವರ ಹೇಳಿಕೆಯಿಂದ ವೇದ್ಯವಾಗುತ್ತದೆ.

ಇನ್ನು ಸರ್ಕಾರಿ ನೌಕರಿಯಲ್ಲಿ ನೇರತಕ್ಕ ತಕ್ಸೀರ್‌ದಾರ, ಅಸಿಸ್ಟೆಂಟ್ ಕಮಿಷನರ್, ಅಮಾ ಜನರೇನಿದಾರೆ ಅವರನ್ನು ಅವರವರ ಸ್ವಂತ ತಾಲ್ಲೂಕುಗಳಲ್ಲಿ ಕೆಲಸಕ್ಕೆ ನೇಮಕ ಮಾಡಬಾರದೆಂದು ಅಷ್ಟೇಅಲ್ಲ ಅವರನ್ನು ಅವರ ಜಿಲ್ಲೆಯಲ್ಲೂ ಕೂಡ ಹಾಕದೆ ಬೇರೆ ಜಿಲ್ಲೆಗಳಲ್ಲಿ ಕೆಲಸಕ್ಕೆ ಹಾಕಬೇಕೆಂದು ಹೇಳುತ್ತಿದ್ದೇನೆ. ಇಲ್ಲವಾದರೆ ಸರ್ಕಾರಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ನಮ್ಮ ಕಡೆ ಒಬ್ಬ ಪಿ. ಎಸ್. ಐ. ನ್ನು ಸಡಲಗಾದಿಂದ ಒಂದಾವರ್ತಿ ವರ್ಗ ಮಾಡಿದಂತೆ ಮಾಡಿ ಮತ್ತೆ

* * The Bill is appended as annexure to this volume.